ಪೊಲೀಸ್ ಸಿಬ್ಬಂದಿಗೆ ವಸತಿ ಸೌಲಭ್ಯ

534 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದರೆಯ ಪೊಲೀಸ್ ಠಾಣೆಯ ಪೊಲೀಸ್ ಠಾಣಾಧಿಕಾರಿಗಳಿಗೆ ಮತ್ತು ಪೊಲೀಸರಿಗೆ ವಸತಿ ನಿರ್ಮಾಣ ಯಾವಾಗ ಮಾಡಲಾಗುವುದು?

ಆ) ಅಲ್ಲಿ ಎಷ್ಟು ವಸತಿ ಗೃಹಗಳು ಆಗಬೇಕಾಗಿದೆ?

ಇ) ಅಲ್ಲಿಯ ಪೊಲೀಸ್ ಇಲಾಖೆಗೆ ಜೀಪಿನ ಅನುಕೂಲತೆ ಯಾವಾಗ ಒದಗಿಸಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ):

ಅ) 1994-95ನೇ ಸಾಲಿನಲ್ಲಿ ಪೊಲೀಸ್ ಠಾಣಾಧಿಕಾರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ನಿರ್ಮಿಸುವ ಬಗ್ಗೆ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಆ) ಪೊಲೀಸ್ ಸಬ್ ಇನ್‌ಸಪೆಕ್ಟರ್ - ಒಂದು
ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ - ಎರಡು
ಹೆಡ್‌ಕಾನ್ಸ್‌ಟೇಬಲ್‌ಗಳು - ನಾಲ್ಕು
ಪೇದೆಗಳು - ಹನ್ನೆರಡು

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ: ಮಾನ್ಯ ಅಧ್ಯಕ್ಷರೆ, ಮೂಡಬಿದರೆಯ ಪೊಲೀಸ್ ಠಾಣೆಯ ಸಿಬ್ಬಂದಿಗಳಲ್ಲಿ 19 ಮಂದಿಗೆ ಇನ್ನೂ ಸಹ ನಿವಾಸ ಇಲ್ಲದೆ ಬಹಳ ತೊಂದರೆಯಲ್ಲಿ ಇದ್ದಾರೆ ಎನ್ನುವ ವಿಚಾರವನ್ನು ಅವರು ಉತ್ತರದಲ್ಲಿ ತಿಳಿಸಿದ್ದಾರೆ. ಸುಮಾರು ಶತಮಾನದಷ್ಟು ಹಳೆಯದಾದಂತಹ ಪೊಲೀಸ್ ಠಾಣೆಯಲ್ಲಿ ಇರುವಂತಹ 29 ಮಂದಿಯಲ್ಲಿ 19 ಮಂದಿಗೆ ನಿವಾಸ ಇಲ್ಲ, ಇದು ಬಹಳ ಕಷ್ಟವಾಗಿದೆ. ಅಲ್ಲಿ ತೊಂದರೆ ಏನೆಂದರೆ ಆ ಏರಿಯಾ ಸ್ವಲ್ಪ ಸೆನ್ಸಿಟಿವ್ ಏರಿಯಾ ಆಗಿದ್ದು, ಪೊಲೀಸ್‌ನವರಿಗೆ ಮನೆಯಲ್ಲಿಯೂ ಬಂದು ಸರಿಯಾಗಿ ನಿಲ್ಲದಂತಹ ಒಂದು ವಾತಾವರಣ ಇರುವ ಕಾರಣ, ಶತಮಾನದಷ್ಟು ಹಳೆಯ ಈ ಪೊಲೀಸ್ ಠಾಣೆಗೆ ಆದ್ಯತೆ ರಂಗದಲ್ಲಿ ಇದಕ್ಕೆ ನಿವಾಸವನ್ನು ಮಾಡುವುದಕ್ಕೆ, ಅದರಲ್ಲೂ ಮುಖ್ಯವಾಗಿ ಸಬ್‌ಇನ್ಸ್‌ಪೆಕ್ಟರ್‌ರವರಿಗೂ ಇಲ್ಲ, ಅಸಿಸ್ಟೆಂಟ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಹೆಡ್ ಕಾನ್ಸ್‌ಟೇಬಲ್ ರವರಿಗೂ ಸಹ ಅಲ್ಲಿ ವಸತಿಗಳು ಇಲ್ಲ, ಇದನ್ನು ಯಾವಾಗ ಮಾಡುತ್ತೀರಿ? ಈ ವರ್ಷದ ಬಜೆಟ್‌ನಲ್ಲಿಯೂ ಸಹ ನನಗೆ ಮೂಡಬಿದರೆ ಹೆಸರು ಕಾಣಸಿಗಲಿಲ್ಲ. ಆದುದರಿಂದ ತಾವು ಅಲ್ಲಿಗೆ ಯಾವಾಗ ಒದಗಿಸುತ್ತೀರಿ ಎಂದು ಕೇಳುತ್ತೇನೆ?

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರ ಅಪೇಕ್ಷೆಯಂತೆ 1994-95ರ ಅಂತ್ಯದ ವರ್ಷದಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ: ಇನ್ನು ಎರಡನೇ ಪ್ರಶ್ನೆ, ಮೂಡಬಿದರೆ ವಲಯದ ಪೊಲೀಸ್ ಠಾಣೆಗೆ ಒಂದು ಜೀಪ್ ಬೇಕು ಎಂದು ಕೇಳಿದ್ದೆ. ಸುಮಾರು 34 ಗ್ರಾಮಗಳನ್ನು ಒಳಗೊಂಡಂತಹ ಹಳ್ಳಿ ವಲಯದಿಂದ ಸೇರಿದಂತಹ ಈ ಕ್ಷೇತ್ರದಲ್ಲಿ ಜೀಪ್ ಇಲ್ಲದೆ ಒಂದು ಬೈಕಿನಲ್ಲಿ ಹೋಗುವಾಗ ಎಷ್ಟೋ ಸಾರಿ ರಕ್ಷಣೆಯನ್ನು ಕೊಡುವಂತಹ ಪೊಲೀಸರ ಮೇಲೆ ಅಕ್ರಮ ನಡೆದು ಅವರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. 4 ವರ್ಷದಿಂದ ಜೀಪನ್ನು ಕೊಡಬೇಕು ಎಂದು ಹತ್ತಾರು ಸಾರಿ ಈ ಪ್ರಶ್ನೆಯನ್ನು ಅಸೆಂಬ್ಲಿಯಲ್ಲಿ ಎತ್ತಿದ್ದೇನೆ. ಈ ಬಾರಿಯಾದರೂ ಆ ಜೀಪನ್ನು

ಪೊಲೀಸ್ ಅಧಿಕಾರಿಗಳಿಗೆ ಕೊಟ್ಟು ರಕ್ಷಿಸುವಂತಹ ಪೊಲೀಸರ ರಕ್ಷಣೆಯನ್ನು ಸರ್ಕಾರ ಮಾಡಬೇಕು ಎಂದು ನಾನು ಕೇಳುತ್ತಿದ್ದೇನೆ. ನೀವು ಯಾವಾಗ ಜೀಪ್ ಒದಗಿಸುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಒಂದೊಂದೇ ತಮ್ಮ ಬೇಡಿಕೆಗಳು ನಮ್ಮ ಮುಂದೆ ಬರುತ್ತಿವೆ. ಏಪ್ರಿಲ್ ತಿಂಗಳಿನಲ್ಲಿ ಕೆಲವು ಜೀಪ್‌ಗಳು ಬರುತ್ತಿವೆ. ಅದರಲ್ಲಿ ಒಂದು ಜೀಪ್‌ನ್ನು ಮೂಡಬಿದರೆ ಪೊಲೀಸ್ ಠಾಣೆಗೆ ಕೊಡುತ್ತೇವೆ.

ಹೊನ್ನಾವರ - ಭಟ್ಕಳದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸುವುದು

505 - ಶ್ರೀ ಆರ್.ಎನ್. ನಾಯ್ಕ (ಭಟ್ಕಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92 ಹಾಗೂ 1992-93ನೇ ಸಾಲುಗಳಲ್ಲಿ ಹೊನ್ನಾವಾರ - ಭಟ್ಕಳ ತಾಲ್ಲೂಕಿನ ಯಾವ್ಯಾವ ಹಳ್ಳಿಗಳಿಗೆ ಪ್ರತಿ ದಿನ ಎಷ್ಟೆಷ್ಟು ಸಲ ಕೆ.ಎಸ್.ಆರ್.ಟಿ.ಸಿ. ಬಸ್ ಓಡಿಸಲಾಗುತ್ತಿತ್ತು?

ಆ) 1993-94ನೇ ಸಾಲಿನಲ್ಲಿ ಇಂದಿನ ದಿನಾಂಕಕ್ಕೆ ಯಾವ್ಯಾವ ಹಳ್ಳಿಗಳಿಗೆ ಎಷ್ಟೆಷ್ಟು ಸಲ ಬಸ್‌ಗಳು ಓಡಾಡುತ್ತಲಿದೆ?

ಇ) ಹೊನ್ನಾವರ - ಮೊಗೋಡ್‌ಗೆ ಹಿಂದೆ ಬಸ್ ಓಡಿಸಲಾಗಿತ್ತೆ?

ಈ) ಹಾಗಿದ್ದಲ್ಲಿ ಯಾವಾಗ ಓಡಿಸಲಾಗುತ್ತಿದೆ?

ಉ) ಇಲ್ಲದಿದ್ದಲ್ಲಿ ಎಂದಿನಿಂದ ಬಸ್ ಓಡಿಸಲಾಗುವುದು?

ಊ) ಭಟ್ಕಳ - ಹೊನ್ನಾವರ ಮಧ್ಯೆ ದೂರದ ಬಸ್ಸು ಹೊರತುಪಡಿಸಿ ಎಷ್ಟು ಬಸ್ಸುಗಳನ್ನು ಭಟ್ಕಳ ಡಿಪೋದಿಂದ ಓಡಿಸಲಾಗುತ್ತಿದೆ?

ಋ) ಈಗ ಅಲ್ಲಿ ಓಡಿಸುವ ಬಸ್‌ಗಳ ಸಂಖ್ಯೆ ಮೊದಲಿಗಿಂತ ಕಡಿಮೆ ಇದೆಯೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಕ.ರಾ.ರ. ಸಾ.ಸಂ.ಯು ಭಟ್ಕಳದಲ್ಲಿರುವ 64 ಗ್ರಾಮಗಳ ಪೈಕಿ 54 ಗ್ರಾಮಗಳಿಗೆ ಹಾಗೂ ಹೊನ್ನಾವರ ತಾಲ್ಲೂಕಿನ 97 ಗ್ರಾಮಗಳ ಪೈಕಿ 82 ಗ್ರಾಮಗಳಿಗೆ ವಾಹನ ಸಂಚಾರಿ ಸೇವೆಯನ್ನು ಒದಗಿಸಿರುತ್ತದೆ. ವಿವರಗಳನ್ನು ಅನಬಂಧದಲ್ಲಿ ನೀಡಲಾಗಿದೆ.

ಆ) ಭಟ್ಕಳ ತಾಲ್ಲುಕಿನಲ್ಲಿ 59 ಟ್ರಿಪ್ಪುಗಳು ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ 143 ಟ್ರಿಪ್ಪುಗಳನ್ನು ಓಡಿಸಲಾಗಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ವಾಹನ ಸಂಚಾರಕ್ಕೆ ಯೋಗ್ಯವಾಗಿರುವ ರಸ್ತೆ ಇಲ್ಲದಿರುವುದರಿಂದ ವಾಹನ ಸಂಚಾರ ಸೇವೆಯನ್ನು ಒದಗಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಅವಗೋಡುವಿನಿಂದ ಮಾಗೋಡಿಗೆ ಇರುವ ಮಾರ್ಗದ ಭಾಗದ ರಸ್ತೆಯು ರಿಪೇರಿಯಾಗದೆ ಇದ್ದು ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ರಸ್ತೆಯು ದುರಸ್ತಿಗೊಂಡ ಮೇಲೆ ಈ ವಾಹನ ಸಂಚಾರವನ್ನು ಒದಗಿಸಲು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಊ) ಭಟ್ಕಳ ಮತ್ತು ಕಾಸರಗೋಡದ ಮಧ್ಯೆ ಹೊನ್ನಾವರ ಮಾರ್ಗದಲ್ಲಿ 26 ಟ್ರಿಪ್ಪುಗಳ ಸಾರಿಗೆ ಸೇವೆಯನ್ನು ಒದಗಿಸಲಾಗಿದೆ.

ಋ) ಇಲ್ಲ.